ಮುಲ್ಕಿ ಮೀನುಗಾರಿಕೆ ಬಂದರು ಬಗ್ಗೆ

573 - ಶ್ರೀ ಸೋಮಪ್ಪ ಸುವರ್ಣ, (ಮೂಡಬಿದರೆ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಮೀನುಗಾರಿಕೆ ಬಂದರು : ಮುಲ್ಕಿಯ ಯೋಜಿತ ಮೀನುಗಾರಿಕೆ ಬಂದರಿನ ಮಂಜೂರಾತಿಯು ಯಾವ ಹಂತದಲ್ಲಿದೆ;

ಆ) ಈ ಯೋಜನೆಯ ಅಂದಾಜುವೆಚ್ಚವೆಷ್ಟು ;

ಇ) ಈ ಯೋಜನೆ ಕಾರ್ಯಗೊಳಿಸಲು ಕೇಂದ್ರ ಸರ್ಕಾರದ ಸಹಾಯ ದೊರೆಯುವುದೇ;

ಈ) ಹಾಗಿದ್ದಲ್ಲಿ ಇದರ ಕೆಲಸ ಯಾವಾಗ ಪ್ರಾರಂಭವಾಗುವುದು?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು) :

(ಅ) ಮುಲ್ಕಿಯಲ್ಲಿ ಈ ಪ್ರಸ್ತಾಪ ಉದ್ಭವಿಸುವುದಿಲ್ಲ. ಆದರೆ ಪಕ್ಕದ ಉಡುಪಿ ತಾಲ್ಲೂಕು ಹೆಜಮಾಡಿ ಕೋಡಿಯಲ್ಲಿ ಈ ಪ್ರಸ್ತಾವನೆ ಇದೆ. ಪ್ರಸ್ತಾವನೆಯು ಭರತ ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ತಂಗುದಾಣದ ನಿರ್ಮಾಣಕ್ಕೆ ಬೇಕಾಗಿರುವ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ; ಭೂ ಸ್ವಾಧೀನದ ಕ್ರಮ ಅಂತಿಮ ಹಂತದಲ್ಲಿದೆ.

(ಆ) ಸುಮಾರು 100.00 ಲಕ್ಷ ರೂಪಾಯಿಗಳು.

(ಇ) ಹೌದು, ಶೇಕಡ 50 ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುವುದು;

(ಈ) ಭಾರತ ಸರ್ಕಾರದ ಮಂಜೂರಾತಿ ದೊರೆತ ಕೂಡಲೇ ಕೆಲಸ ಪ್ರಾರಂಭಿಸಲಾಗುವುದು.

ಬೀದರ್ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿ

384 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಯಾವ ಯಾವ ಕ್ರಮಗಳನ್ನು ರೂಪಿಸಲಾಗಿದೆ;

ಆ) ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳನ್ನು ಇದಕ್ಕಾಗಿ ಆಯ್ದುಕೊಳ್ಳಲಾಗಿದೆ;

ಇ) ಕಳೆದ 4 ವರ್ಷಗಳಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ವಿಚ್ರ್ಯ ಮಾಡಲಾಯಿತು;

ಈ) ಇದರಿಂದ ಯಾವ ಯಾವ ಕೆಲಸಗಳನ್ನು ಮಾಡಲಾಗಿದೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಮೀನು ಮರಿಗಳನ್ನು ದಾಸ್ತಾನು ಮಾಡುವುದು, ಮೀನುಗ್ಗಾರಿಕೆ ಮತ್ತು ಮೀನುಗಾರರ ಸಹಕಾರ ಸಂಘಗಳಿಗೆ ನೆರವು, ಮೀನು ಸಾಕಾಣೆ ಕೊಳಗಳ ನಿರ್ಮಾಣ, ಮೀನುಗಾರರಿಗೆ ತರಬೇತಿ, ಪರಿಶಿಷ್ಟ ವರ್ಗದವರಿಗೆ ನೆರವು, ಮತ್ಸ್ಯಾಲಯ ಸ್ಥಾಪನೆ.

ಆ) ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ರೂ. 22.50 ಲಕ್ಷ.

ಈ) ಮುಖ್ಯವಾಗಿ ಕೆರೆಗಳಲ್ಲಿ ಮೀನು ಕೃಷಿಗಾಗಿ 35.70 ಲಕ್ಷ ಮೀನು ಮರಿಗಳ ಬಿತ್ತನೆ, 5 ಮೀನು ಕೃಷಿ ಕೊಳಗಳ ನಿರ್ಮಾಣಕ್ಕಾಗಿ ರೈತರಿಗೆ ರೂ. 50,000-00